ಉಪಾಧ್ಯಕ್ಷರು: ಈಗ ಒಬ್ಬರು ಮಾತನಾಡಿದ್ದಾರೆ, ಇನ್ನಿಬ್ಬರಿಗೆ ಎರಡೆರಡು ನಿಮಿಷ ಕೊಡುತ್ತೇನೆ.

(ಎ) ಕುಂದಾಪುರ ತಾಲ್ಲೂಕಿನ ಗ್ರಾಮ ಪಂಚಾಯಿತಿ ನೌಕರನನ್ನು ವಜಾ ಮಾಡಿದ್ದರಿಂದ ಆತ್ಮ ಹತ್ಯೆ ಮಾಡಿ ಕೊಂಡಿರುವುದು

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತರುವುದೇನೆಂದರೆ, ಕುಂದಾಪುರ ತಾಲ್ಲೂಕಿನ ಅವಮಾಸ ಬಯಲು ಗ್ರಾಮಪಂಚಾಯಿತಿಯಲ್ಲಿ 26-4-89ರಂದು ಪರಿಶಿಷ್ಟ ಪಂಗಡದ ರಾಜು ನಾಯಕ್ ಎಂಬುವವರನ್ನು ದಿನಗೂಲಿ ನೌಕರರನ್ನಾಗಿ ನೇಮಕ ಮಾಡಿಕೊಳ್ಳುತ್ತಾರೆ. ಆ ನೌಕರರಿಗೆ 'ಡಿ' ದರ್ಜೆ ನೌಕರರಿಗೆ ಸಿಗತಕ್ಕ ಸಂಬಳವನ್ನು ಕೊಟ್ಟಿರುತ್ತಾರೆ. ಅವನು ಮದ್ಯಪಾನ ಮಾಡಿಕೊಂಡು ಬಂದಿದ್ದಾನೆಂದು 27-2-1997ರಂದು ಮೂರು ದಿವಸಗಳ ನೋಟಿಸ್ ಕೊಟ್ಟು ಕೆಲಸದಿಂದ ವಜಾ ಮಾಡುತ್ತಾರೆ. ಆ ಸಂದರ್ಭದಲ್ಲಿ ಆ ನೌಕರ ಅದೇ ಪಂಚಾಯಿತಿ ಕಛೇರಿಯಲ್ಲಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನ ಮೂರು ಹೆಣ್ಣುಮಕ್ಕಳು ಬೀದಿಪಾಲಾಗಿದ್ದಾರೆ. ಸರ್ಕಾರದಿಂದ ಕಾನೂನು ಬದ್ಧವಾಗಿ ಕೊಡಬೇಕಾದ ಸೌಲಭ್ಯವನ್ನು ಅವನ ಹೆಂಡತಿಯವರಿಗೆ ಕೊಡಬೇಕು. ಮತ್ತು ಅದೇ ಗ್ರಾಮಪಂಚಾಯಿತಿಯಲ್ಲಿ ಅವನ ಕುಟುಂಬದವರಿಗೆ ಒಂದು ಉದ್ಯೋಗವನ್ನು ಕೊಡಿಸಬೇಕೆಂದು ನನ್ನ ಕಳಕಳಿಯ ಮನವಿ. ಮತ್ತೊಂದು ವಿಚಾರ, ಶೂನ್ಯವೇಳೆಯಲ್ಲಿ ನಾನು ನಿನ್ನೆ ದಿವಸ ಎತ್ತಿದ ವಿಚಾರದ ಬಗ್ಗೆ ಅವರು ಉತ್ತರಕೊಡಬೇಕಾಗಿದೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನವೀಯವಾಗಿ ನೋಡಬೇಕಾಗಿದೆ. ಆ ನೌಕರ ಆತ್ಮಹತ್ಯೆ ಮಾಡಿಕೊಂಡಿದ್ದಾರೋ ಅಥವಾ ಮತ್ಯಾವುದಾದರೂ ಕಾರಣವಿದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರೇ ಪ್ರಸ್ತಾಪ ಮಾಡಿರುವಂತೆ ಆ ವ್ಯಕ್ತಿ ಪಂಚಾಯಿತಿ ನೌಕರ. ಪಂಚಾಯಿತಿ ನೌಕರರು ಸರ್ಕಾರಿ ನೌಕರರಲ್ಲ. ಪಂಚಾಯಿತಿಯ ನೌಕರರಿಗೆ ನಿಯಮದ ಪ್ರಕಾರ ಕೊಡಬೇಕಾದ ಸೌಲಭ್ಯಗಳನ್ನು ಗ್ರಾಮಪಂಚಾಯಿತಿಯವರೆ ಕೊಡಬೇಕು. ಅನುಕಂಪದ ಆಧಾರದ ಮೇಲೆ ಅವರ ಕುಟುಂಬದವರಿಗೆ ನೇಮಕ ಮಾಡಿಕೊಳ್ಳುವುದಾಗಿದ್ದರೆ ನಾವು ಸಹ ಗ್ರಾಮಪಂಚಾಯಿತಿಯ ಮೇಲೆ ಒತ್ತಡವನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಿಂದ ತರುತ್ತೇವೆ. ತಾವೂ ಸಹ ಪ್ರಯತ್ನ ಮಾಡಿ ಗ್ರಾಮಪಂಚಾಯಿತಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದಿದ್ದರೆ ಈ ಕುಟುಂಬ ಸದಸ್ಯರಿಗೆ ನೇಮಕಾತಿ ಮಾಡಿಕೊಳ್ಳಲು ತಮ್ಮ ಪತ್ರದ ಮೇಲೆ ನಾವು ಬರೆದು ಕಳುಹಿಸುತ್ತೇವೆ. ತಾವೂ ಪ್ರಭಾವವನ್ನು ಉಪಯೋಗಿಸಿದರೆ ಅದು ಸಾಧ್ಯವಾಗಬಹುದೆಂದು ನಾನು ಭಾವಿಸಿದ್ದೇನೆ.